ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 27-5-2017

## ಪತ್ರಿಕಾ ಪ್ರಕಟಣೆ

# ವೆಬ್‌ಸೈಟ್‌ನಲ್ಲಿ ಪರಿಷ್ಕೃತ ಪತ್ರಕರ್ತರ ಮಾಸಾಶನ ಅರ್ಜಿ

ಬೆಂಗಳೂರು, ಮೇ 27 (ಕರ್ನಾಟಕ ವಾರ್ತೆ)

ಪತ್ರಕರ್ತರ ಮಾಸಾಶನ ಅರ್ಜಿಯನ್ನು ಪರಿಷ್ಕರಿಸಿ ಹೊಸ ಅರ್ಜಿ ನಮೂನೆಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಮಾಸಾಶನ ಪಡೆಯಲಿಚ್ಛಿಸುವ ಅರ್ಹ ಪತ್ರಕರ್ತರು ಇಲಾಖೆ ವೆಬ್‌ಸೈಟ್ karnatakainformation.gov.in ನಿಂದ ಅಥವಾ ಆಯಾ ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಅರ್ಜಿಯನ್ನು ಪಡೆಯಬಹುದಾಗಿದೆ.

ಅರ್ಹ ಪತ್ರಕರ್ತರನ್ನು ಆಯ್ಕೆಮಾಡಲು ರಾಜ್ಯ ಸರ್ಕಾರ ಇತ್ತೀಚೆಗೆ ನೂತನ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಿದ್ದು, ಸಮಿತಿಯು ಕಾಲಕಾಲಕ್ಕೆ ಸಭೆ ಸೇರಿ ಮಾಸಾಶನ ಕೋರಿ ಬಂದಂತಹ ಅರ್ಜಿಗಳನ್ನು ಪರಿಶೀಲೀಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲಿದೆ.

ಅರ್ಜಿಯಲ್ಲಿ ಅರ್ಹತಾ ನಿಬಂಧನೆಗಳನ್ನು ನೀಡಲಾಗಿದ್ದು, ಅರ್ಹತಾ ನಿಬಂಧನೆಗಳನ್ನು ಪೂರೈಸುವ ಪತ್ರಕರ್ತರು ಅಗತ್ಯ ದಾಖಲಾತಿಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಆಯಾ ಜಿಲ್ಲಾ ವಾರ್ತಾಧಿಕಾರಿಗಳಿಗೆ ಸಲ್ಲಿಸಬಹುದಾಗಿದೆ.

ಮಮತ

# ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರಕ್ಕೆ ನಾಗರೀಕ ಸೇವಾ ಸಮಾಜದಿಂದ ಸದಸ್ಯರ ಹುದ್ದೆಗೆ ನೇಮಕಾತಿ

**ಬೆಂಗಳೂರು, ಮೇ 27 (ಕರ್ನಾಟಕ ವಾರ್ತೆ)**

ಅಪರ ಪೊಲೀಸ್ ಅಧೀಕ್ಷಕರು, ಪೊಲೀಸ್ ಅಧೀಕ್ಷಕರು ಮತ್ತು ಮೇಲಿನ ಹಂತದ ಪೊಲೀಸ್ ಅಧಿಕಾರಿಗಳ ವಿರುದ್ಧ ಸಾರ್ವಜನಿಕರು ದೂರು ಸಲ್ಲಿಸಲು ಅನುಕೂಲವಾಗುವಂತೆ ಕರ್ನಾಟಕ ಪೊಲೀಸ್ (ತಿದ್ದುಪಡಿ) ಕಾಯ್ದೆ, 2012 ರ ಕಲಂ 20ಃ ರಡಿ ಕಲ್ಪಿಸಿರುವ ಅವಕಾಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಉಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.

ಪ್ರಾಧಿಕಾರಕ್ಕೆ ಇತರೆ ಸದಸ್ಯರುಗಳನ್ನೊಳಗೊಂಡಂತೆ ನಾಗರೀಕ ಸೇವಾ ಸಮಾಜದಿಂದ ಒಬ್ಬ ಸದಸ್ಯರನ್ನು ಆಯ್ಕೆ ಮಾಡಲು ಕಲಂ 20ಃ (1) (III) ರಡಿ ಅವಕಾಶ ಕಲ್ಪಿಸಲಾಗಿದ್ದು, ಈ ಸದಸ್ಯರಿಗೆ ಅರ್ಹತೆ ಈ ಕೆಳಕಂಡಂತಿವೆ.

**The persons in the panel shall be a person of repute who has rendered humanitarian service in the field of education, health, upliftment of the poor etc., and had not aligned himself with any political party or ideological group.**

ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರಕ್ಕೆ ನಾಗರೀಕ ಸಮಾಜದಿಂದ ಓರ್ವ ಸದಸ್ಯರನ್ನು ನೇಮಕಮಾಡಲು ಈ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತಿಯುಳ್ಳ ಸಾರ್ವಜನಿಕರು ಜೂನ್ 20 ರ ಒಳಗಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ಕೊಠಡಿ ಸಂಖ್ಯೆ: 222, 2ನೇ ಮಹಡಿ, ವಿಧಾನಸೌಧ, ಬೆಂಗಳೂರು ಇಲ್ಲಿಗೆ ವೈಯಕ್ತಿಕ ವಿವರಗಳೊಂದಿಗೆ (ಬಯೋಡೇಟಾ) ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ. ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದ ಬಗೆಗಿನ ಹೆಚ್ಚಿನ ಮಾಹಿತಿಯನ್ನು http://www.karnataka.gov.in/spca ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಎಂಆರ್‌ಎಂ/ಜಿಪಿಆರ್.

## ಮಾಜಿ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಪ್ರತಿಮೆಗೆ ಮುಖ್ಯಮಂತ್ರಿಗಳಿಂದ ಮಾಲಾರ್ಪಣೆ

ಬೆಂಗಳೂರು, ಮೇ 27 (ಕರ್ನಾಟಕ ವಾರ್ತೆ)

ಮಾಜಿ ಪ್ರಧಾನ ಮಂತ್ರಿ ದಿವಂಗತ ಜವಾಹರಲಾಲ್ ನೆಹರು ಅವರ 53 ನೇ ಪುಣ್ಯ ತಿಥಿ ಅಂಗವಾಗಿ ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿರುವ ನೆಹರು ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು..

ನೆಹರು ಅವರು ದೇಶದ ಅಭಿವೃದ್ಧಿಗೆ ಅಡಿಪಾಯ ಹಾಕಿದವರು, ಮತ್ತು ಮಕ್ಕಳನ್ನು ಹಾಗೂ ಈ ದೇಶವನ್ನು ಬಹಳ ಪ್ರೀತಿಸುತ್ತಿದ್ದರು. ಅವರ ಹಾದಿಯಲ್ಲೇ ನಾವೆಲ್ಲರೂ ಇಂದು ನಡೆಯಬೇಕಿದೆ.

ಕೇಂದ್ರ ಸರ್ಕಾರದ ಗೋಹತ್ಯೆ ನಿಷೇಧ ಕಾಯ್ದೆಗೆ ಸಂಬಂಧಿಸಿದಂತೆ ಈವರೆಗೆ ಅಧಿಕೃತ ಆದೇಶದ ಪ್ರತಿ ಇನ್ನೂ ಕೈ ಸೇರಿಲ್ಲ. ಆದೇಶದ ಪ್ರತಿ ಬಂದ ಬಳಿಕ ಪರಿಶೀಲನೆ ನಡೆಸುವುದಾಗಿ ಪತ್ರಕರ್ತರ ಪ್ರಶ್ನೆಗೆ

ಮುಖ್ಯಮಂತ್ರಿಯವರು ಪ್ರತಿಕ್ರಿಯಿಸಿದರು. ಬೆಂಗಳೂರು ನಗರಾಭಿವೃದ್ಧಿ ಸಚಿವ ಕೆ. ಜೆ. ಜಾರ್ಜ್, ಶಾಸಕ ಅಶೋಕ ಪಟ್ಟಣ ಶೆಟ್ಟಿ ಸೇರಿದಂತೆ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಕೆಪಿಪಿ/ಜಿಪಿಆರ್

## ಜೂನ್ 5 ರಂದು 14ನೇ ಅಧಿವೇಶನ

ಬೆಂಗಳೂರು, ಮೇ 27 (ಕರ್ನಾಟಕ ವಾರ್ತೆ)

ವಿಧಾನ ಸಭೆಯ 14 ನೇ ಅಧಿವೇಶನವು ಜೂನ್ 5 ರಂದು ಬೆಳಿಗ್ಗೆ 11.30 ಗಂಟೆಗೆ ಬೆಂಗಳೂರಿನ ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸಮಾವೇಶಗೊಳ್ಳಲಿದೆ ಎಂದು ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿಯವರು ತಿಳಿಸಿದ್ದಾರೆ.

ಕೆಪಿಪಿ/ಜಿಪಿಆರ್

## ಮೇ 30 ರಂದು ಔಷಧ ಅಂಗಡಿಗಳ ಮುಷ್ಕರ ಹಿನ್ನೆಲೆಯಲ್ಲಿ – ಔಷಧ ಲಭ್ಯತೆಗಾಗಿ ಬದಲಿ ವ್ಯವಸ್ಥೆ

ಬೆಂಗಳೂರು, ಮೇ 27 (ಕರ್ನಾಟಕ ವಾರ್ತೆ)

ಕರ್ನಾಟಕ ಔಷಧ ವ್ಯಾಪಾರಿಗಳ ಸಂಘ, ಬೆಂಗಳೂರು ಮತ್ತು ಬೃಹತ್ ಬೆಂಗಳೂರು ಕೆಮಿಸ್ಟ್ ಅಂಡ್ ಡ್ರಗ್ಗಿಸ್ಟ್ ಅಸೋಶಿಯೇಶನ್ ಬೆಂಗಳೂರು ಅವರುಗಳು ಆನ್‌ಲೈನ್ ಮೂಲಕ ಔಷಧ ಮಾರಾಟವನ್ನು ವಿರೋಧಿಸಿ, ಮೇ 30 ರಂದು 24 ಗಂಟೆಗಳ ಕಾಲ ರಾಜ್ಯದ ಔಷಧ ವ್ಯಾಪಾರಿಗಳು ಬಂದ್ ಮಾಡುವ ಮೂಲಕ ಮುಷ್ಕರದಲ್ಲಿ ಭಾಗವಹಿಸಲಿದ್ದಾರೆಂದು ತಿಳಿಸಿರುವ ಹಿನ್ನೆಲೆಯಲ್ಲಿ ರಾಜ್ಯದ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ, ಖಾಸಗಿ ಆಸ್ಪತ್ರೆಗಳಲ್ಲಿ, ನರ್ಸಿಂಗ್ ಹೋಂಗಳಲ್ಲಿ ಕಾರ್ಪೋರೇಟ್ ಆಸ್ಪತ್ರೆಗಳಿಗೆ ಹೊಂದಿಕೊಂಡಿರುವಂತಹ ಔಷಧ ಅಂಗಡಿಗಳು ಬಂದ್‌ನಿಂದ ವಿನಾಯಿತಿ ಹೊಂದಿದ್ದು, ಮೇ 30 ರಂದು ಎಂದಿನಂತೆ ತೆರೆದಿರುತ್ತವೆ. ಸಾರ್ವಜನಿಕರು ಔಷಧಿಗಳಿಗೆ ಈ ಔಷಧಿ ಅಂಗಡಿಗಳನ್ನು ಸಂಪರ್ಕಿಸಬಹುದು.

ಔಷಧ ನಿಯಂತ್ರಣ ಇಲಾಖೆಯ, ರಾಜ್ಯದ ಎಲ್ಲಾ ಜಿಲ್ಲೆಯ ಕಚೇರಿಗಳ ಸಹಾಯಕ ಔಷಧ ನಿಯಂತ್ರಕರುಗಳಿಗೆ ಸಾರ್ವಜನಿಕರಿಗೆ ಔಷಧ ಲಭ್ಯತೆಯ ಕುರಿತು ಮಾಹಿತಿಯನ್ನು ನೀಡಲು ಸೂಚಿಸಲಾಗಿದೆ. ಎಲ್ಲಾ ಜಿಲ್ಲಾ ಕಚೇರಿಗಳ ಸಹಾಯಕ ಔಷಧ ನಿಯಂತ್ರಕರುಗಳ ದೂರವಾಣಿ ಸಂಖ್ಯೆ ಮತ್ತು ಇತರೆ ವಿವರಗಳು ಇಲಾಖೆಯ ಅಂತರ್ಜಾಲ **http://drugs.kar.nic.in** ನಲ್ಲಿ ಲಭ್ಯವಿರುತ್ತದೆ.

ಮೇ 30 ರಂದು ಸಾರ್ವಜನಿಕರಿಗೆ ಔಷಧ ಲಭ್ಯತೆಯ ಬಗ್ಗೆ ಮಾಹಿತಿಯನ್ನು ನೀಡಲು ಔಷಧ ನಿಯಂತ್ರಣ ಇಲಾಖೆಯ ಈ ಕೆಳಕಂಡ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಾರ್ವಜನಿಕರು ಓಂಕಾರ್, ಸಹಾಯಕ ಔಷಧ ನಿಯಂತ್ರಕರು, ಬೆಂಗಳೂರು ವೃತ್ತ–1 ಮೊಬೈಲ್ ಸಂಖ್ಯೆ 9845492967, ದೂ. ಸಂಖ್ಯೆ 080–22341745, ಎಂ. ಸುರೇಶ್, ಸಹಾಯಕ ಔಷಧ ನಿಯಂತ್ರಕರು, ಬೆಂಗಳೂರು ವೃತ್ತ – 2 ಮೊಬೈಲ್ ಸಂಖ್ಯೆ 9141166046, ದೂ. ಸಂಖ್ಯೆ 080–

**22341789, 3. ಗೋಣೆಫಕೀರಪ್ಪ, ಸಹಾಯಕ ಔಷಧ ನಿಯಂತ್ರಕರು, ಬೆಂಗಳೂರು ವೃತ್ತ – 3 ಮೊಬೈಲ್ ಸಂಖ್ಯೆ 9902759871 ದೂ. ಸಂಖ್ಯೆ 080–22341742, 4. ಕೆಂಪಯ್ಯ ಸುರೇಶ್, ಸಹಾಯಕ ಔಷಧ ನಿಯಂತ್ರಕರು, ಬೆಂಗಳೂರು ವೃತ್ತ – 4 ಮೊಬೈಲ್ ಸಂಖ್ಯೆ 9880718974 ದೂ. ಸಂಖ್ಯೆ 080–22341743, 5. ನಾರಾಯಣ ರೆಡ್ಡಿ, ಸಹಾಯಕ ಔಷಧ ನಿಯಂತ್ರಕರು, ಬೆಂಗಳೂರು ವೃತ್ತ – 5 ಮೊಬೈಲ್ ಸಂಖ್ಯೆ 9880139146, ದೂ. ಸಂಖ್ಯೆ 080–22341741 ಹಾಗೂ 6. ಉಮಾಕಾಂತ್ ಪಾಟೀಲ್, ಸಹಾಯಕ ಔಷಧ ನಿಯಂತ್ರಕರು, ಬೆಂಗಳೂರು ವೃತ್ತ – 6 ಮೊಬೈಲ್ ಸಂಖ್ಯೆ 9341264210 ದೂ. ಸಂಖ್ಯೆ 080–22341740.**

## ದೂರದರ್ಶನದಲ್ಲಿ ನೆಲದ ಸಿರಿ ಮಾಲಿಕೆ

**ಬೆಂಗಳೂರು, ಮೇ 27 (ಕರ್ನಾಟಕ ವಾರ್ತೆ)**

ವಾರ್ತಾ ಮತ್ತು ಸಾರ್ವಜನಿಕ ಇಲಾಖೆಯ ಪ್ರಸ್ತುತಪಡಿಸುವ "ನೆಲದ ಸಿರಿ ಮಾಲಿಕೆ"ಯಡಿ ಈ ಕೆಳಕಂಡ ಸಾಕ್ಷ್ಯಚಿತ್ರಗಳನ್ನು ಆಯಾ ದಿನಾಂಕದಂದು ಬೆಂಗಳೂರು ದೂರದರ್ಶನದಲ್ಲಿ ಸಂಜೆ 6:00 ರಿಂದ 6:15 ಅವಧಿಯಲ್ಲಿ ಪ್ರಸಾರ ಮಾಡಲಾಗುವುದು.

1) ದಿನಾಂಕ: 30-05-2017, ಮಂಗಳವಾರ, ಡಾ॥ ಅಬ್ದುಲ್ ಕಲಾಮ್ ಜ್ಞಾಪಕಾರ್ಥ, ವಿಂಗ್ಸ್ ಟು ಫ್ಲೈ, ಸ್ವಯಂ ಉದ್ಯೋಗಕ್ಕಾಗಿ ಯೋಜನೆ, ಬಳ್ಳಾರಿ.
2) ದಿನಾಂಕ: 31-05-2017, ಬುಧವಾರ, ನಿಡುಮಾಮಡಿ ಶ್ರೀ ವೀರಭದ್ರ ಚೆನ್ನಮಲ್ಲ ಸ್ವಾಮೀಜಿ,
3) ದಿನಾಂಕ: 01-06-2017, ಗುರುವಾರ, ಕಿಮ್ಸ್ ಕ್ಯಾನ್ಸರ್ ಚಿಕಿತ್ಸಾ ಘಟಕ ಸ್ಥಾಪನೆ, ಹುಬ್ಬಳ್ಳಿ ಮತ್ತು ಜಿಲ್ಲಾ ಆಸ್ಪತ್ರೆ, ಹೊಸ ಕಟ್ಟಡ, ಧಾರವಾಡ,
4) ದಿನಾಂಕ: 02-06-2017, ಶುಕ್ರವಾರ, ಉತ್ತರ ಕನ್ನಡ ಜಿಲ್ಲೆಯ ಪ್ರವಾಸಿ ತಾಣಗಳು
5) ದಿನಾಂಕ: 05-06-2017, ಸೋಮವಾರ, ಕನ್ನಡ ಸಾಹಿತ್ಯ ಪರಿಷತ್,
6) ದಿನಾಂಕ: 06-06-2017, ಮಂಗಳವಾರ, ನಗರೋತ್ಥಾನ ಯೋಜನೆಯಡಿ ಮೈಸೂರು ನಗರಾಭಿವೃದ್ಧಿ.